**MVC 5715 / 2022 PW4 Chief and Cross**

**ಐದನೇ ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಲಯ, ಮೇಯೋಹಾಲ್ ವಿಭಾಗ, ಬೆಂಗಳೂರು.**
**ದಿಃ 15.02.2024 ರಂದು ಸಾಕ್ಷಿದಾರರಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**
**ಮುಂದುವರಿದ ಮುಖ್ಯ ವಿಚಾರಣೆ:**

| | | |
|---|---|---|
| 1 | ಅಧಿಕಾರ ಪತ್ರ, ಅರ್ಜಿದಾರರ ನೇಮಕಾತಿ ಪತ್ರ | ನಿಪಿ.23, 24 |
| 2 | ಅರ್ಜಿದಾರರ ಎಂಟು ಸ್ಯಾಲರಿ ಸ್ಲಿಪ್ ಗಳನ್ನು ಒಟ್ಟಾಗಿ | ನಿಪಿ.25 |
| 3 | ಟರ್ಮಿನೇಷನ್ ಲೆಟರ್ | ನಿಪಿ.26 |
| 4 | ಕಂಪನಿಯವರು ನೀಡಿರುವ ನನ್ನ ಗುರುತಿನ ಚೀಟಿ | ನಿಪಿ.27 |

ಎಂದು ಗುರುತಿಸಲಾಯಿತು.

**ಪಾಟಿ ಸವಾಲುಃ 2 ನೇ ಎದುರುದಾರ ಪರ ವಕೀಲರಿಂದಃ**

ಅರ್ಜಿದಾರರು 2018 ರಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದರು. ನಮ್ಮ ಕಂಪನಿ ಸಣ್ಣ ಪ್ರಮಾಣದ ಕಂಪನಿ ಆದ ಕಾರಣ ನಿ.ಪಿ.23 ರಿಂದ 26 ನ್ನು ಕಂಪನಿಯ ಲೆಟರ್ ಹೆಡ್ ನಲ್ಲಿ ಸಲ್ಲಿಸಿಲ್ಲ. ನಾವು ಅಪಾರ್ಟ್‌ಮೆಂಟ್ ಗಳ ಮಾರ್ಕೆಟಿಂಗ್ ವ್ಯವಹಾರ ಮಾಡುತ್ತೇವೆ.  ಶಂಕರ್ ಮೋಹನ್ ಕುಮಾರ್ ಎಂಬುವವರು ನಮ್ಮ ಸಂಸ್ಥೆಯ ಮಾಲೀಕರು. ನಿಪಿ.27 ಕ್ಕೆ ಬುಲ್ ವರ್ಕ ರಿಯಾಲಿಟಿ ಎಂಬ ಮೊಹರು ಇಲ್ಲ ಎಂದರೆ ಸರಿ. ಸಾಕ್ಷಿ ಸದರಿ ಸಂಸ್ಥೆ ಯುನೈಟೆಡ್ ಸಂಸ್ಥೆಯೊಂದಿಗೆ ವಿಲೀನವಾಗಿರುವ ಕಾರಣ ನಮ್ಮ ಮಾಲೀಕರು ನಿಪಿ.27 ರಂತೆ ಗುರುತಿನ ಚೀಟಿ ನೀಡಿದ್ದಾರೆ. ಅರ್ಜಿದಾರರು ಬುಲ್ ವರ್ಕ್ ಸಂಸ್ಥೆಗೆ ಸೇರಿಕೊಂಡಿದ್ದು, ಯುನೈಟೆಡ್ ಸಂಸ್ಥೆಗೂ ಸಹ ಕೆಲಸ ಮಾಡುತ್ತಿದ್ದರು. ನಿಪಿ.24 ನ್ನು ನಾವು ಹಾರ್ಡ್ ಕಾಪಿ ಕಳುಹಿಸಿದ್ದೆವು. ಮೂಲ ದಾಖಲೆಗಳು ಅರ್ಜಿದಾರರ ಬಳಿ ಇರುತ್ತದೆ. ಅರ್ಜಿದಾರರು ಯುನೈಟೆಡ್ ಎಂಬ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರಲಿಲ್ಲ, ಆ ಕಾರಣ ಸೂಕ್ತ ದಾಖಲೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಅರ್ಜಿದಾರರ ಗುರುತಿನ ಚೀಟಿಯನ್ನು ಸಲ್ಲಿಸಿದ್ದೇನೆ ಎನ್ನುತ್ತಾರೆ. ಅರ್ಜಿದಾರರು ಭೌತಿಕವಾಗಿ ಟೆಲಿಫೋನ್ ಮಾರ್ಕೆಟಿಂಗ್ ಕೆಲಸ ಮಾಡುತ್ತಿದ್ದರು. ಅರ್ಜಿದಾರರಿಗೆ ಸಹಾಯ ಮಾಡಲು ನಿಪಿ.23 ರಿಂದ 27 ನ್ನು ಸೃಷ್ಟಿಸಿ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಸ್ಯಾಲರಿ ಸ್ಲಿಪ್ ಗಳನ್ನು ನೀಡಿದಾಗ ಅರ್ಜಿದಾರರ ಸಹಿ ಪಡೆದುಕೊಂಡಿದ್ದೆವು. ನಮ್ಮಲ್ಲಿ ಸಾಫ್ಟ್ ಕಾಪಿ ಮಾತ್ರ ಇರುತ್ತದೆ. ಸುಳ್ಳು ದಾಖಲೆ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

( 1 ನೇ ಎದುರುದಾರರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ. ಹೇ.ಕೇ. ಸರಿ ಇದೆ.

ಐದನೇ ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಲಯ,
ಮೇಯೋಹಾಲ್ ವಿಭಾಗ, ಬೆಂಗಳೂರು.